





# ಕೆಫೆಯೂ.. ಕಲೆಯೂ..!

■ ಚಿತ್ರ- ಬರಹ: ಸಿ.ಸಿದ್ದರಾಜು ಆಲಕೆರೆ

'ಹಳೆ ಕಬ್ಬಿಣ ಹಳೆ ಪೇಪರ್...' ಎಂಬ ಕನ್ನಡ ಚಿತ್ರಗೀತೆಯನ್ನು ನೀವು ಕೇಳಿರಬಹುದು. ಹಳೇ ವಸ್ತುಗಳ ಹೆಸರನ್ನೇ ಬಳಸಿಕೊಂಡು ಯೋಗರಾಜ್ ಭಟ್ರು ಬರೆದ ಹಾಡು ಜನಪ್ರಿಯವಾಯಿತು. ಬುದ್ಧಿವಂತರು ಹಳೆಯ ವಸ್ತುಗಳಿಗೆ ಮೆರುಗು ಕೊಟ್ಟು, ಅವುಗಳನ್ನೇ ಆಕರ್ಷಕವಾಗಿ ಕಾಣುವಂತೆ ಮಾಡುತ್ತಾರೆ. ಸೃಜನಶೀಲ ಮನಸ್ಸುಗಳಿಗೆ ಹಳತೇ ಹೊಸತಾಗುತ್ತದೆ. 'ಓಲ್ಡ್ ಈಸ್ ಗೋಲ್ಡ್' ಎನ್ನುವುದು ನಿಜ. ಹಳೆಯ ವಸ್ತುಗಳನ್ನು ನಿರ್ಲಕ್ಷಿಸಿದರೆ ಅವುಗಳಿಗೆ ಬೆಲೆ ಇಲ್ಲ. ಆದರೆ ಬೆಲೆ ಇಲ್ಲದ ಈ ವಸ್ತುಗಳನ್ನೇ ಬಳಸಿಕೊಂಡು ತಮ್ಮ ಕೆಫೆ ಗ್ಯಾರೇಜ್ ಹೋಟೆಲ್ ಅನ್ನು ಆಕರ್ಷಣೆಯ ಕೇಂದ್ರ ಮಾಡಿದ್ದಾರೆ ಮೂವರು ಯುವಕರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಎಂದಾಕ್ಷಣ ನೆನಪಿಗೆ ಬರುವುದು ಆದಿರಂಗ ಎಂದೇ ಖ್ಯಾತಿ ಪಡೆದಿರುವ ಶ್ರೀ ರಂಗನಾಥ ದೇವಾಲಯ. ಇದು ಮೈಸೂರು ಒಡೆಯರ್, ಹೈದರಾಲಿ, ಟಿಪ್ಪೂ




